ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेट, बेङ्गलूरु – ५६००१८.


ಕಸಂವಿ/ನಾಟಕೋತ್ಸವ/2017–18

ದಿನಾಂಕ: 03.07.2017

## ಸುತ್ತೋಲೆ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಸಂಸ್ಕೃತ ಮಾಸಾಚರಣೆಯ ಅಂಗವಾಗಿ ಧಾರವಾಡದಲ್ಲಿ ಕಾಲೇಜು ಸ್ತರದ ನಾಟಕೋತ್ಸವ ನಡೆಯಲಿದೆ. ಈ ನಾಟಕೋತ್ಸವದಲ್ಲಿ ಭಾಗವಹಿಸುವ ತಂಡಗಳು ಜುಲೈ 30ರೊಳಗಾಗಿ ತಮ್ಮ ವಿದ್ಯಾರ್ಥಿಗಳ ಹೆಸರು ಮತ್ತು ನಾಟಕದ ಹೆಸರು ಮತ್ತು ನಾಟಕ ಪ್ರದರ್ಶನದ ಸಮಯವನ್ನು ವಿಶ್ವವಿದ್ಯಾಲಯಕ್ಕೆ ತಿಳಿಸಲು ಸೂಚಿಸಿದೆ. ನಾಟಕೋತ್ಸವಕ್ಕೆ ಸಂಬಂಧಿಸಿದ ಇನ್ನಿತರ ವಿವರಗಳು ಈ ಕೆಳಕಂಡಂತಿವೆ.

1. ಎರಡು ದಿನಗಳ ಕಾಲ ಸ್ಪರ್ಧೆ ನಡೆಯಲಿದೆ.
2. ಒಂದು ಕಾಲೇಜಿನಿಂದ ಒಂದು ತಂಡ ಮಾತ್ರ ಭಾಗವಹಿಸಬಹುದು. ಒಂದು ಗುಂಪಿನಲ್ಲಿ 5 ರಿಂದ 10 ಜನ ಮಾತ್ರ ಭಾಗವಹಿಸಬಹುದು.
3. ಸಂಸ್ಕೃತ ಭಾಷೆಯಲ್ಲಿಯೇ ನಾಟಕಗಳನ್ನು ಪ್ರಸ್ತುತಪಡಿಸಬೇಕು. ನಾಟಕದ ವಸ್ತು – ವಿಷಯ ಹಾಸ್ಯ, ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಅಥವಾ ಕಾಲ್ಪನಿಕ ಆಗಿರಬಹುದು.
4. ಪರದೆಯ ವ್ಯವಸ್ಥೆ ಮಾಡಲಾಗುತ್ತದೆ.
5. ಒಂದು ತಂಡಕ್ಕೆ ಆಹಾರ್ಯ/ ಪ್ರಸಾಧನಕ್ಕಾಗಿ 5 ಸಾವಿರ ರೂ ಗಳನ್ನು ನೀಡಲಾಗುತ್ತದೆ.
6. ಒಬ್ಬ ಶಿಕ್ಷಕರಿಗೆ ಪ್ರಯಾಣ ಭತ್ಯೆ ನೀಡಲಾಗುತ್ತದೆ. ಮತ್ತು ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಯಾಣಭತ್ಯೆ ನೀಡಲಾಗುತ್ತದೆ. ಪ್ರಯಾಣದ ಬಿಲ್ಲುಗಳನ್ನು ಸಲ್ಲಿಸುವುದು ಕಡ್ಡಾಯ.
7. ನಾಟಕದ ಪ್ರಸ್ತುತಿಗೆ ಕಾಲಾವಕಾಶ 45 ನಿಮಿಷಗಳು.
8. ನುರಿತ ನಿರ್ಣಾಯಕರು ನಾಟಕಗಳನ್ನು ಪರಿವೀಕ್ಷಿಸುವುದರಿಂದ ಉತ್ಕೃಷ್ಟ ಮಟ್ಟದ ನಾಟಕಗಳ ಪ್ರದರ್ಶನವಾಗುವಂತೆ ನೋಡಿಕೊಳ್ಳುವುದು.
9. ಪ್ರಥಮ ಬಹುಮಾನ – ನಗದು ಮತ್ತು ಟ್ರೋಫಿ, ದ್ವಿತೀಯ ಬಹುಮಾನ – ನಗದು ಮತ್ತು ಟ್ರೋಫಿ, ತೃತೀಯ ಬಹುಮಾನ – ನಗದು ಮತ್ತು ಟ್ರೋಫಿ ಮತ್ತು ಒಂದು ಸಮಾಧಾನಕರ ಬಹುಮಾನ – ನಗದು ನೀಡಲಾಗುತ್ತದೆ.
10. ಧಾರವಾಡ ನಗರದಲ್ಲಿ ಆಗಸ್ಟ್ 17 -18 ರಂದು ನಾಟಕೋತ್ಸವ ನಡೆಯಲಿದೆ.
11. ಹಿನ್ನೆಲೆ ಸಂಗೀತ ವ್ಯವಸ್ಥೆ ತಾವೇ ಮಾಡಿಕೊಳ್ಳುವುದು.

Shilpa

ಕುಲಸಚಿವರು

ಪ್ರತಿಗಳು:
1. ಮಾನ್ಯ ಕುಲಪತಿಗಳ ಆಪ್ತಶಾಖೆ
2. ನಿರ್ದೇಶಕರು, ಸಂ.ಶಿ.ನಿ ರವರಿಗೆ, ಎಲ್ಲಾ ಪಾಠಶಾಲೆಗಳಿಗೆ ರವಾನಿಸಲು ಮತ್ತು ನಾಟಕೋತ್ಸವದ ಜವಾಬ್ದಾರಿ ನಿರ್ವಹಿಸಲು.
3. ನಿರ್ದೇಶಕರು, ಅಧ್ಯಯನಾಂಗ
4. ಪ್ರಾಚಾರ್ಯರು, ಎಲ್ಲ ಸಂಸ್ಕೃತ ಕಾಲೇಜುಗಳು
5. ಡೀನರು, ಕ.ಸಂ.ವಿ
6. ಕಛೇರಿ ಪ್ರತಿ